# ಆಹಾ ಸುದ್ದಿ!

★ ಸಸಿತೋಟ



ಅಮೆರಿಕಾದಲ್ಲಿ ಮಹಿಳೆಯೊಬ್ಬಳು ಗಂಡ ಹಾಗೂ ಮಗಳನ್ನು ಕಾರಿನಲ್ಲೇ ಕೂರಿಸಿ ಮನೆಯೊಳಗೆ ತೆರಳಿದಾಗ ಕಾರು ಉರುಳಿಕೊಂಡು ಸಮೀಪದಲ್ಲಿದ್ದ ಈಜುಗೊಳಕ್ಕೆ ಹೋಗಿ ಬಿತ್ತಂತೆ. 'ಕಾರ್ ಪೂಲ್' ಅನ್ನು ಈ ರೀತಿ ಅರ್ಥೈಸಬಾರದಿತ್ತು.

ಅಮೆರಿಕಾದ ಬರ್ಗ್‌ಕ್ಯಾಂಪ್ ಎಂಬಾತನಿಗೆ ಅದೃಷ್ಟ ಎರಡೆರಡು ಬಾರಿ ಕೈ ಕೊಡಬಾರದಿತ್ತು. ತನ್ನ ಮಾಜಿ ಪ್ರೇಯಸಿಯ ಮನೆಗೆ ನುಗ್ಗಿದ್ದ ಆತ ಅಡಗಿ ಕೂತಾಗ ಛಾವಣಿಯಿಂದ ಜಾರಿ ಬಿದ್ದು ನೇರವಾಗಿ ಸೇರಿದ್ದು ಪೊಲೀಸರ ಕೈಕೋಳಕ್ಕೆ. ಪೊಲೀಸರು ಆತನನ್ನು ಆಸ್ಪತ್ರೆಗೆ ಸೇರಿಸಿ ಕೈ ತೊಳೆದುಕೊಳ್ಳುವಷ್ಟರಲ್ಲಿ ಪಕ್ಕದ ಮಹಿಳಾ ರೋಗಿಯ ಟಿ– ಷರ್ಟ್ ಧರಿಸಿ ಓಡಿ ಹೋಗಿದ್ದು ಮತ್ತೆ ಪೊಲೀಸ್ ಜೀಪಿಗೆ ಎದುರಾದನಂತೆ. ಈಗ ಬೆನ್ನಿಗೆ ಎರಡೆರಡು ಪ್ರಕರಣಗಳನ್ನು ಹೊತ್ತುಕೊಂಡು ಜೈಲಿನಲ್ಲಿ ಕೂತಿದ್ದಾನಂತೆ.





ಕಾಂಬೋಡಿಯಾದಲ್ಲಿ ವಿಷಕಾರಿ ತರಂತುಲ (ಹುಲಿ ಸಾರಂಗ)ವನ್ನು ಕರಿದು, ಬೆಳ್ಳುಳ್ಳಿ ಪೇಸ್ಟ್ ಬೆರೆಸಿ ತಿನ್ನುವುದು ಬಹಳ ರುಚಿಕರ ಖಾದ್ಯವಂತೆ. ಇವು ವಿನಾಶದತ್ತ ಸಾಗಿವೆ ಎಂಬುದು ಅಲ್ಲಿಯವರ ಅಳಲು. ಆರಾಮವಾಗಿ ಅರಣ್ಯದಲ್ಲಿ ಓಡಾಡುತ್ತಿದ್ದವುಗಳನ್ನು ಹೊಟ್ಟೆಗಿಳಿಸಿದರೆ ಇನ್ನೇನಾದೀತು!



ಪೋರ್ತುಗಲ್‌ನಲ್ಲಿ ನಡೆದ ಚಾಕೊಲೇಟ್ ಉತ್ಸವದಲ್ಲಿ 23 ಕ್ಯಾರಟ್ ಚಿನ್ನದ ಹಾಳೆ ಸುತ್ತಿದ ಕ್ಯಾಂಡಿಯನ್ನು ಪ್ರದರ್ಶಿಸಲಾಯಿತು. ಚಾಕೊಲೇಟ್‌ಗೂ ಚಿನ್ನದ ದರ ಎಂದು ಹೀಗೂ ಹೇಳಬಹುದು.

ದೆಹಲಿ ವಿಧಾನಸಭೆಯ ಅವಿವಾಹಿತ ಶಾಸಕರಿಗೆ ಮದುವೆಗೆಂದು ಯಾವುದೇ ಸಂಬಂಧ ಬರುತ್ತಿಲ್ಲವಂತೆ. ಇದಕ್ಕೆ ಕಡಿಮೆ ಸಂಬಳ ಕಾರಣವಂತೆ. ಸದ್ಯ 12 ಸಾವಿರ ಸಂಬಳ ಬರುತ್ತಿದ್ದು, 2– 2.5 ಲಕ್ಷ ರೂಪಾಯಿ ವೇತನದ ಬೇಡಿಕೆಯನ್ನು ಗೃಹ ಸಚಿವರ ಮುಂದಿಟ್ಟಿದ್ದಾರಂತೆ. ಸೂಕ್ತ ಸಚಿವರನ್ನೇ ಹುಡುಕಿದ್ದಾರೆ ಬೇಡಿಕೆ ಈಡೇರಿಸಿಕೊಳ್ಳಲು.



ಚೀನಾದ ಈ ನಾಯಿ ಹಗ್ಗದ ಮೇಲಿನ ನಡಿಗೆಯಲ್ಲಿ ಪರಿಣತಿ ಸಾಧಿಸಿದೆಯಂತೆ. ಚತುಷ್ಪಾದಿಯಾಗಿರುವುದರಿಂದ ಎರಡು ಹಗ್ಗಗಳ ಮೇಲೆ ನಡಿಗೆಗೆ ಅವಕಾಶ ನೀಡಲಾಗಿದೆ.